**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿಯವರ ನ್ಯಾಯಾಲಯ, ಪೊನ್ನಂಪೇಟೆ.**

**ಕ್ರಿ.ಮೊ.ಸಂಖ್ಯೆ:529/2025**

**ಪಿರ್ಯಾದುದಾರರು:** : ರಾಜ್ಯ ಸರ್ಕಾರ,
ಶ್ರೀಮಂಗಲ ಪೋಲೀಸ್ ಠಾಣೆ,

**ವಿರುದ್ಧ**

**ಆರೋಪಿಗಳು:**

1. ಶ್ರೀ ಚೊಟ್ಟೆಯಾಂಡಮಾಡ ಬೋಪಯ್ಯ,
ಪ್ರಾಯಃ 58 ವರ್ಷ,
ವಾಸಃ ವೆಸ್ಟ್ ನೆಮ್ಮಾಲೆ ಗ್ರಾಮ,
ಶ್ರೀಮಂಗಲ, ಕೊಡಗು.

2. ಶ್ರೀ ಚೊಟ್ಟೆಯಾಂಡಮಾಡ ಸಂಜು,
ತಂದೆಃ ಪೌತಿ ಗಣಪತಿ,
ಪ್ರಾಯಃ 44 ವರ್ಷ,
ವಾಸಃ ವೆಸ್ಟ್ ನೆಮ್ಮಾಲೆ ಗ್ರಾಮ,
ಶ್ರೀಮಂಗಲ, ಕೊಡಗು.

**ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಗಳ ಹೇಳಿಕೆ**

**ಪ್ರಶ್ನೆ ಸಂಖ್ಯೆ - 1** : ಇದುವರೆವಿಗೂ ಅಭಿಯೋಜನೆ ಪರ ಸಾಕ್ಷ್ಯ ನುಡಿದ ಸಾಕ್ಷಿಗಳ ಸಾಕ್ಷ್ಯವನ್ನು ಆಲಿಸಿದ್ದೀರಾ?

ಉಃ ಕೇಳಿದ್ದೇನೆ.

**ಪ್ರಶ್ನೆ ಸಂಖ್ಯೆ - 2.** ಪ್ರಾ.ಸಾ.1/ಚಾ.ಸಾ.1 ಶ್ರೀಮತಿ ವಾಣಿ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿ21.01.2025 ರಂದು ಇಟಾಚಿ ವಾಹನವನ್ನು ಅವರ ರಸ್ತೆಗೆ ತರಬೇಡಿ ಎಂದು ಹೇಳಿದ್ದಕ್ಕೆ ಆರೋಪಿಗಳಾದ ನೀವುಗಳು ಅವರ ಗಂಡನಿಗೆ ಕೈಯಿಂದ ಹೊಡೆದಿರುತ್ತೀರಿ. ಮತ್ತು ಅವರಿಗೆ ಬೋಳಿ ಮಗನೆ ಸಾಯಿಸಿಬಿಡುತ್ತೇವೆ ಎಂದು ಹೆದರಿಸಿರುತ್ತೀರಿ. ಚಾ.ಸಾ.1 ರವರು ನಿಲ್ಲಿಸಲು ಬಂದಾಗ, ಅವರ ಬಟ್ಟೆಯನ್ನು ಹರಿದು ಹಾಕಿರುತ್ತೀರಿ. ನಂತರ ಅವರು ಹೋಗಿ ಶ್ರೀಮಂಗಲ ಪೋಲೀಸ್ ಠಾಣೆಗೆ ದೂರು ಕೊಟ್ಟಿರುತ್ತಾರೆ. ಪೋಲೀಸರು ಸುಮಾರು 11.00 ಗಂಟೆಯಿಂದ 12.30ರ ತನಕ ಮಹಜರ್ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು.

**ಪ್ರಶ್ನೆ ಸಂಖ್ಯೆ - 3.** ಪ್ರಾ.ಸಾ.2/ಚಾ.ಸಾ.2 ಶ್ರೀ ಸಿ.ಎಸ್.ರಮೇಶ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ21.01.2025 ರಂದು ಅವರ ರಸ್ತೆಗೆ ಆರೋಪಿಗಳಾದ ನೀವುಗಳು ಹಿಟಾಚಿ ವಾಹನವನ್ನು ತೆಗೆದುಕೊಂಡು ಹೋಗಿರುತ್ತೀರಿ. ಅವರು ವಾಹನವನ್ನು ಬಿಟ್ಟಿರುವುದಿಲ್ಲ, ಆಗ ಆರೋಪಿಗಳಾದ ನೀವುಗಳು ಅವರನ್ನು ಹೊಡೆದಿರುತ್ತೀರಿ, ತಡೆಯಲು ಬಂದ ಚಾ.ಸಾ.1 ರವರ ಬಟ್ಟೆಯನ್ನು ಹರಿದಿರುತ್ತೀರಿ. ನಂತರ ಚಾ.ಸಾ.1 ರವರು ಶ್ರೀಮಂಗಲ ಪೋಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿರುತ್ತಾರೆ. ನಂತರ ಚಾ.ಸಾ.1 ರವರು ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತಾರೆ. ಮರುದಿನ ಪೋಲೀಸರು

ಬಂದು ಮಹಜರ್ ಮಾಡಿರುತ್ತಾರೆ. ಗಲಾಟೆ ಆದ ಸ್ಥಳದಲ್ಲಿ ಪೋಲೀಸರು ಫೋಟೋ ತೆಗೆದುಕೊಂಡಿರುತ್ತಾರೆ ನಂತರ ಚಾ.ಸಾ.1 ರವರು ಗಲಾಟೆ ಸಮಯದಲ್ಲಿ ಧರಿಸಿದ್ದ ಮೆರೂನ್ ಬಣ್ಣದ ಚೂಡಿದಾರ್ ಅನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು.

**ಪ್ರಶ್ನೆ ಸಂಖ್ಯೆ - 4.** ಪ್ರಾ.ಸಾ.3/ಚಾ.ಸಾ.3 ಮುತ್ತಮ್ಮ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ಜೆ.ಸಿ.ಬಿ ವಾಹನವು ಚಾ.ಸಾ.2 ರವರ ಗದ್ದೆಯ ಹತ್ತಿರ ಇದ್ದುದ್ದಾಗಿ, ಅವರ ಮಗಳು ಚಾ.ಸಾ.1 ಅಲ್ಲಿಗೆ ಬಂದಾಗ, ಆರೋಪಿಗಳಾದ ನೀವುಗಳು ಅವರಿಗೆ ಹೊಡೆದು ಗಲಾಟೆಯಲ್ಲಿ ಅವರ ನೇರಳೆ ಬಣ್ಣದ ಬಟ್ಟೆ ಹರಿದಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು.

**ಪ್ರಶ್ನೆ ಸಂಖ್ಯೆ - 5.** ಪ್ರಾ.ಸಾ.4/ಚಾ.ಸಾ.5 ದೇವಯ್ಯ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ22.01.2025 ರಂದು ಅವರು ಮತ್ತು ಚಾ.ಸಾ.4 ರವರು ಶ್ರೀಮಂಗಲದ ಶೆಟ್ಟಿಗೇರಿ ಟೌನ್ ನಲ್ಲಿರುವಾಗ, ಶ್ರೀಮಂಗಲ ಪೋಲೀಸರು ಸಹಿ ಮಾಡಲು ಅವರನ್ನು ನೆಮ್ಮಾಲೆ ಗ್ರಾಮಕ್ಕೆ ಕರೆದುಕೊಂಡು ಹೋಗಿರುತ್ತಾರೆ. ರಸ್ತೆಯ ವಿಚಾರಕ್ಕೆ ಮಹಜರ್ ಮಾಡಿರುತ್ತಾರೆ, ಅವರ ಸಮಕ್ಷಮ ಸ್ಥಳದಲ್ಲಿ ಫೋಟೋ ತೆಗೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು.

**ಪ್ರಶ್ನೆ ಸಂಖ್ಯೆ - 6.** ಪ್ರಾ.ಸಾ.5/ಚಾ.ಸಾ.7 ಸತೀಶ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ24.02.2025 ರಂದು ಪೋಲೀಸರು ವಸ್ಟ್ ನೆಮ್ಮಾಲೆ ಗ್ರಾಮದಲ್ಲಿನ ಚಾ.ಸಾ.2 ರವರ ಗದ್ದೆಯ ಹತ್ತಿರ ಅವರ ಕುಟುಂಬಸ್ಥರ ಮನೆಗೆ ಹೋಗುವ ಮಣ್ಣು ದಾರಿ ಬಗ್ಗೆ ಮಾಹಿತಿ ಕೋರಿದ್ದು, ಅದರಂತೆ ಅವರು ದಾರಿ ಇರುವುದಾಗಿ ದಿಃ29.01.2025 ರಂದು ನಿ.ಪಿ.5 ಮತ್ತು ನಿ.ಪಿ.6 ಮನವಿ ಮತ್ತು ದೃಢೀಕರಣ ಪತ್ರವನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು.

**ಪ್ರಶ್ನೆ ಸಂಖ್ಯೆ - 7.** ಪ್ರಾ.ಸಾ.7/ಚಾ.ಸಾ.8 ಬಸವರಾಜು ಡಿ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ22.01.2025 ರಂದು ವೆಸ್ಟ್ ನೆಮ್ಮಲೆ ಗ್ರಾಮದಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ವತ್ತು ಅಮಾನತ್ತು ಮಜರ್ ಮತ್ತು ಸ್ಥಳ ಮಹಜರ್ ಮಾಡುವಾಗ OPPO Reno 7, 5G ನಿಂದ ಫೋಟೋ ಮತ್ತು ವಿಡಿಯೋ ಮಾಡಿರುತ್ತಾರೆ. ನಿ.ಪಿ.2

ಮಹಜರ್ ಗೆ ಸ್ಥಳದಲ್ಲೆ ಸಹಿ ಮಾಡಿರುತ್ತಾರೆ. ನಂತರ ಠಾಣೆಗೆ ಬಂದು ಇಲಾಖಾ ಠಾಣಾ ಕಂಪ್ಯೂಟರ್ ಮತ್ತು ಎಪ್ಸನ್ ಪ್ರಿಂಟರ್ ನಲ್ಲಿ ಪ್ರಿಂಟ್ ತೆಗೆಸಿ ಚಾ.ಸಾ.9 ರವರಿಗೆ ಫೋಟೋ ಮತ್ತು ವಿಡಿಯೋವನ್ನು ಸಿ.ಡಿ ಗೆ ಹಾಕಿ ಕೊಟ್ಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು.

**<u>ಪ್ರಶ್ನೆ ಸಂಖ್ಯೆ - 8.</u>** ಪ್ರಾ.ಸಾ.8/ಚಾ.ಸಾ.9 ಬಿ.ಎಂ.ಪ್ರಮೋದ್ ಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ21.01.2025 ರಂದು ಚಾ.ಸಾ.1 ರವರು ಠಾಣೆಗೆ ಬಂದು ನೀಡಿದ ದೂರನ್ನು ಪಡೆದು ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತಾರೆ. ಅದೇ ದಿನ ಚಾ.ಸಾ.2 ರವರನ್ನು ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ದಿಃ22.01.2025 ರಂದು ಕೃತ್ಯ ಸ್ಥಳವಾದ ವೆಸ್ಟ್ ನೆಮ್ಮಲೆ ಗ್ರಾಮದ ಚೊಟ್ಟೆಯಂಡ ಮಾಡ ಕುಟುಂಬಸ್ಥರ ಮನೆಗೆ ಹೋಗುವ ರಸ್ತೆಯ ಮಧ್ಯದಲ್ಲಿ ಸ್ಥಳ ಮಹಜರ್ ಮಾಡಿರುತ್ತಾರೆ. ಚಾ.ಸಾ.1 ರವರು ಹಾಜರು ಪಡಿಸಿದ ಚೂಡಿದಾರ್ ಅನ್ನು ಚಾ.ಸಾ.4 ಮತ್ತು 5 ರವರ ಸಮಕ್ಷಮ ಮಹಜರ್ ಜರುಗಿಸಿ ಸಹಿ ಮಾಡಿದ ಚೀಟಿ ಹಾಕಿ ವಶಪಡಿಸಿಕೊಂಡಿರುತ್ತಾರೆ. ಚಾ.ಸಾ.8 ರವರಿಂದ ಸಾಕ್ಷ್ಯ ಪ್ರಮಾಣ ಪತ್ರ ಪಡೆದಿರುತ್ತಾರೆ. ನಂತರ ಚಾ.ಸಾ.2 ರಿಂದ 5 ರವರ ಹೇಳಿಕೆಗಳನ್ನು ಪಡೆದಿರುತ್ತಾರೆ. ದಿಃ23.01.2025 ರಂದು ಆರೋಪಿಗಳಾದ ತಮಗೆ ತನಿಖೆಗೆ ಹಾಜರಾಗಲು ನೋಟೀಸ್ ನೀಡಿರುತ್ತಾರೆ. ದಿಃ24.01.2025 ರಂದು ಚಾ.ಸಾ.7 ರವರು ನೀಡಿದ ದೃಢೀಕರಣ ಪತ್ರವನ್ನು ಪಡೆದಿರುತ್ತಾರೆ. ದಿಃ02.02.2025 ರಂದು ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಯಿಂದ ಚಾ.ಸಾ.1 ಮತ್ತು 2 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದು, ಆರೋಪಿಗಳಾದ ನಿಮ್ಮ ಮೇಲೆ ಆರೋಪ ಸಾಬೀತಾದ ಕಾರಣ ನ್ಯಾಯಾಲಯಕ್ಕೆ ದೋಷರೋಪಣ ಪಟ್ಟಿ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು.

**<u>ಪ್ರಶ್ನೆ ಸಂಖ್ಯೆ - 9.</u>** ಪ್ರಾ.ಸಾ.9/ಚಾ.ಸಾ.6 ಡಾ.ಹೆಚ್.ವಿ.ಸುರೇಶ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ21.01.2025 ರಂದು ಶ್ರೀಮಂಗಲದ ಮಹಿಳೆ ಪೋಲೀಸ್ ರವರು ಹಲ್ಲೆಗೊಳಗಾದ ಚಾ.ಸಾ.1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ಅವರಿಗೆ ಚಿಕಿತ್ಸೆ ಕೊಟ್ಟಿರುತ್ತಾರೆ. ಚಾ.ಸಾ.1 ರವರು Pain in chest and abdomen ಎಂದ ಹೇಳಿದ್ದು, ಅದರಂತೆ ಅವರು ನಿ.ಪಿ.11 ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಇದೇ ಪ್ರಕರಣದಲ್ಲಿ ಚಾ.ಸಾ.2 ರವರು ಗಾಯಗೊಂಡಿದ್ದು, ಅವರನ್ನು ಪರೀಕ್ಷಿಸಿದಾಗ ಹಲ್ಲೆಯಾಗಿದ್ದು, ಕೆಳಗೆ ಬಿದ್ದು ಎಡ ತೋಳಿನಲ್ಲಿ ನೋವು ಇರುವುದಾಗಿ ತಿಳಿಸಿರುತ್ತಾರೆ. ಅದರಂತೆ ಅವರು ನಿ.ಪಿ.12 ಗಾಯದ ಪ್ರಮಾಣ ಪತ್ರವನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**<u>ಪ್ರಶ್ನೆ ಸಂಖ್ಯೆ -10 :</u>** ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಅಥವಾ ದಾಖಲಾತಿ ಹಾಜರುಪಡಿಸಲು ಬಯಸುವಿರಾ?

ಉತ್ತರಃ ಇಲ್ಲ.

**<u>ಪ್ರಶ್ನೆ ಸಂಖ್ಯೆ -11 :</u>** ಈ ಪ್ರಕರಣದಲ್ಲಿ ನೀವೇನಾದರೂ ಹೇಳಬಯಸುವಿರಾ?

ಉತ್ತರಃ ಇಲ್ಲ.

(ತೆರೆದ ನಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆರೋಪಿಯು ನೀಡಿದ ಉತ್ತರಗಳನ್ನು ದಿ16-07-2026 ರಂದು ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು).

ಸ್ಥಳಃ ಪೊನ್ನಂಪೇಟೆ
ದಿಃ16.07.2026.

**Sd/-**
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್
ಪೊನ್ನಂಪೇಟೆ.